ಓ.ಎಸ್. ನಂಃ 458/2023

**ಪಿ. ಡಬ್ಲ್ಯೂಃ 1**

**ದಿನಾಂಕ 24.10.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯ ಪರ ಃ ಶ್ರೀ ಸಿ.ಎಲ್.ಎಂ. ವಕೀಲರಿಂದಃ**

1. ನಾನು ಪಿ.ಯು.ಸಿಯ ವರೆಗೆ ವಿದ್ಯಾಭ್ಯಾಸವನ್ನು ಮಾಡಿರುತ್ತೇನೆ. ವಾದಿಗೆ ಈಗ 45 ವರ್ಷ ವಯಸ್ಸಾಗಿರುತ್ತದೆ. ನನ್ನ ತಂದೆ ಮರಣ ಹೊಂದಿ ಈಗ 4 ವರ್ಷವಾಗಿದ್ದು, ನನ್ನ ತಂದೆಯವರು ಮರಣ ಹೊಂದುವ ಪೂರ್ವದಿಂದಲೇ ವಾದಿಗೆ ಅನಾರೋಗ್ಯವಿತ್ತು. ನನಗೆ ಈ ದಾವೆಯ ಬಗ್ಗೆ ಸಂಪೂರ್ಣ ಮಾಹಿತಿ ಇದೆ. ದಾವಾ ಆಸ್ತಿಯ ನೋಂದಾಯಿತ ಕ್ರಯ ಪತ್ರವನ್ನು ನೋಡಿ ವಾದಿಯು ದಾವಾ ಆಸ್ತಿಯನ್ನು ಖರೀದಿಸಿರುತ್ತಾರೆ. ದಾವಾ ಆಸ್ತಿಯ ಡಿಮ್ಯಾಂಡ್ ರಿಜಿಸ್ಟರ್ ನ ನಕಲನ್ನು ನಾನು ನೋಡಿರುತ್ತೇನೆ.

2. ದಾವಾ ಆಸ್ತಿಯು ಮೂಲತಃ ಗಂಗಮ್ಮ ಕೋಂ ಎಚ್.ಜೆ ಮುದ್ದರಾಮಯ್ಯ ರವರಿಗೆ ಸೇರಿದ್ದ ಆಸ್ತಿಯಾಗಿತ್ತು ಎಂದರೆ ಸರಿಯಲ್ಲ. ದಾವಾ ಆಸ್ತಿಯ ದಾಖಲೆಗಳೆಲ್ಲವೂ ಸಹ ಮೊದಲು ಸದರಿ ಗಂಗಮ್ಮ ಕೋಂ ಎಚ್.ಜೆ ಮುದ್ದರಾಮಯ್ಯ ರವರ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಒಂದು ಡಿಮ್ಯಾಂಡ್ ರಿಜಿಸ್ಟರ್ ನ ದೃಢೀಕೃತ ನಕಲನ್ನು ತೋರಿಸಿ, ಅದರಲ್ಲಿ ಜಂಜರ್ ಸಂಖ್ಯೆ 112 ಮತ್ತು ಸ್ವತ್ತಿನ ಸಂಖ್ಯೆ 103ರ ಮುಂದೆ ಮೊದಲು ಎಲ್ ಕೆ ದೀಪಕ್, ಕೆ ಸುರೇಶ್, ಪ್ರತಿವಾದಿಯ ಹೆಸರು ಆದ ನಂತರದಲ್ಲಿ ವಾದಿಯ ಹೆಸರು ನಮೂದು ಆಗಿರುತ್ತದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನೋಡಿ ಹೌದು ಎಂದು ಉತ್ತರಿಸಿದ್ದು, ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು.

3. 2011ರ ಪೂರ್ವದಲ್ಲಿ ದಾವಾ ಆಸ್ತಿಯು ಯಾರ ಹೆಸರಿನಲ್ಲಿತ್ತು ಎನ್ನುವ ಬಗ್ಗೆ ದಾಖಲೆಗಳನ್ನು ವಾದಿಯು ನೋಡಿರುತ್ತಾರೆ. 2011ರ ಪೂರ್ವದಲ್ಲಿ ದಾವಾ ಆಸ್ತಿಯು ಯಾರ ಹೆಸರಿನಲ್ಲಿತ್ತು ಎಂದು ತೋರಿಸಲು ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಪಿ-5ರ ದಾಖಲೆಯನ್ನು ನಾವು ದಾವಾ

ಆಸ್ತಿಯ ಮಾರಾಟಗಾರರಾದ ಶ್ರೀ. ಸುರೇಶ್ ರವರಿಂದ ಪಡೆದುಕೊಂಡಿರುತ್ತೇವೆ. ದಾವಾ ಆಸ್ತಿಯ ಮಾರಾಟಗಾರರಾದ ಶ್ರೀ. ಸುರೇಶ್ ಹಾಗೂ ನಾವು ಪಂಚಾಯ್ತಿ ಅಧಿಕಾರಿಗಳೊಂದಿಗೆ ಶಾಮೀಲಾಗಿ ನಿಪಿ-5ರ ಸುಳ್ಳು ದಾಖಲೆಯನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಪ್ರಸ್ತುತ ಆಸ್ತಿಗಳ ಕಂದಾಯ ರಸೀದಿಗಳು ನಮೂನೆ-3ರಲ್ಲಿ ಬರುತ್ತಿದ್ದು, ನಿಪಿ-5ರ ದಾಖಲೆಯು ನಮೂನೆ-3ರಲ್ಲಿ ಇರದ ಕಾರಣ ಸದರಿ ದಾಖಲೆಯನ್ನು ನಾವು ಈ ದಾವೆಗೋಸ್ಕರ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-5ರ ಸುಳ್ಳು ದಾಖಲೆಯ ಆಧಾರದ ಮೇಲೆ ವಾದಿ ಮೋಸದಿಂದ ದಾವಾ ಆಸ್ತಿಯನ್ನು ಪ್ರತಿವಾದಿಯ ಬೆನ್ನ ಹಿಂದೆ ತಮ್ಮ ಹೆಸರಿಗೆ ವರ್ಗಾವಣೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

4. ದಾವಾ ಆಸ್ತಿಯ ಪಂಚಾಯ್ತಿ ದಾಖಲೆಗಳಲ್ಲಿ ಪುಟ್ಟ ಸ್ವಾಮಿಗೌಡ ಮತ್ತು ಸುರೇಶ್ ಬಿನ್ ಕಾಳೇಗೌಡರ ಹೆಸರುಗಳು ಎಂದಿಗೂ ಸಹ ನಮೂದಾಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಸುರೇಶ್ ಬಿನ್ ಕಾಳೇಗೌಡರಿಗೆ ಯಾವ ಮೂಲದಿಂದ ಬಂತು ಎಂದು ತಿಳಿದುಕೊಳ್ಳಲು ನಾವು ಅವರ ಮೂಲ ಕ್ರಯ ಪತ್ರವನ್ನು ಪಡೆದುಕೊಂಡಿರುತ್ತೇವೆ. ಸುರೇಶ್ ಬಿನ್ ಕಾಳೇಗೌಡರವರ ಹೆಸರಿನಲ್ಲಿರುವ ದಾವಾ ಆಸ್ತಿಯ ಮೂಲ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನಮಗೆ ತೊಂದರೆ ಇಲ್ಲ.

5. ಪ್ರತಿವಾದಿಯು ಮೈಲಾಂಪುರ ದಲ್ಲಿ ವಾಸವಿದ್ದಾರೆ. ಇಷ್ಟನ್ನು ಹೊರತುಪಡಿಸಿ, ನನಗೆ ಪ್ರತಿವಾದಿಯ ವೈಯಕ್ತಿಕ ವಿಷಯಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ದಾವಾ ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ದಾವಾ ಆಸ್ತಿಯನ್ನು ಗುರುತಿಸುವ ಉದ್ದೇಶದಿಂದ ಸುರೇಶ್ ಬಿನ್ ಕಾಳೇಗೌಡರವರಿಂದ ದಾವಾ ಆಸ್ತಿಯ ನಕಾಶೆಯನ್ನು ಪಡೆದು ನೋಡಿರುತ್ತೇವೆ.

6. ದಾವಾ ಆಸ್ತಿಯು ಮೂಲತಃ ಪುಟ್ಟಸ್ವಾಮಿಗೌಡರಿಗೆ ಸರಕಾರದಿಂದ ಮಂಜೂರಾದ ಆಸ್ತಿಯಾಗಿರುತ್ತದೆ. ದಾವಾ ಆಸ್ತಿಯು ಪುಟ್ಟಸ್ವಾಮಿಗೌಡರಿಗೆ ಸರಕಾರದಿಂದ ಮಂಜೂರಾದ ಬಗ್ಗೆ ಹಕ್ಕು ಪತ್ರವನ್ನು ನಾನು ನೋಡಿರುತ್ತೇನೆ. ದಾವಾ ಆಸ್ತಿಯ ಸಂಬಂಧ ಪುಟ್ಟಸಾಮಿಗೌಡರ ಹೆಸರಿಗೆ ಸರಕಾರದವರು ನೀಡಿದ ಮೂಲ ಹಕ್ಕು ಪತ್ರವು ನಮ್ಮ ಬಳಿಯಿದ್ದು, ಅದನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ.

**ಮುಂದುವರೆದ ಪಾಟಿ ಸವಾಲಿಗೆ ಪ್ರತಿವಾದಿ ಪರ ವಕೀಲರು ಕಾಲಾವಕಾಶವನ್ನು ಕೋರಿದ್ದು, ಕಾಲಾವಕಾಶವನ್ನು ನೀಡಲಾಯಿತು.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**